ದಿನಾಂಕ 05.12.2018 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲುಃ- 5 ರಿಂದ 7ನೇ ಆರೋಪಿಗಳ ಪರವಾಗಿ ಶ್ರೀ.ಎಸ್.ಎಂ. ರವರಿಂದಃ**

12. ನಾನು ವ್ಯವಸಾಯ ಮಾಡುತ್ತೇನೆ. ಪಂಚನಾಮೆಗೆ ನೀವು ಪಂಚರಾಗಿ ಬರಬೇಕು ಎಂದು ಪೊಲೀಸರು ನನಗೆ ನೋಟೀಸ್ ಕೊಟ್ಟಿಲ್ಲ. ಮಹಜರ್‌ನಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ನಾನು ಓದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಆರೋಪಿ-5, 6 ಮತ್ತು 7 ರಿಂದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ. ಪೊಲೀಸರು ರುಜು ಮಾಡಿ ಎಂದು ತಿಳಿಸಿದ್ದಕ್ಕಾಗಿ ರುಜು ಮಾಡಿದ್ದೇನೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.